# ಐಆರ್‌ಸಿಟಿಸಿ ಹೆಸರಲ್ಲಿ ನಕಲಿ ಆ್ಯಪ್

■ ಶಶಿಕುಮಾರ್ ಸಿ.

ಭಾರತೀಯ ರೈಲ್ವೆ ಕ್ಯಾಟರಿಂಗ್ ಹಾಗೂ ಪ್ರವಾಸೋದ್ಯಮ ನಿಗಮದ (ಐಆರ್‌ಸಿಟಿಸಿ) ಹೆಸರಿನಲ್ಲಿ ನಕಲಿ ಆ್ಯಪ್ ಸೃಷ್ಟಿಸಿರುವ ಸೈಬರ್ ಕಳ್ಳರು, ಈ ಆ್ಯಪ್ ಬಳಸಿದ ಗ್ರಾಹಕರ ಹಣ ಹಾಗೂ ಮಾಹಿತಿ ಕದ್ದು ವಂಚಿಸುತ್ತಿವೆ.

ಐಆರ್‌ಸಿಟಿಸಿ ಆ್ಯಪ್ ಮಾದರಿಯಲ್ಲಿ ನಕಲಿ ಆ್ಯಪ್ ಸೃಷ್ಟಿಸಿ ಸಾಮಾಜಿಕ ಜಾಲತಾಣಗಳಲ್ಲಿ ಅದರ ಲಿಂಕ್ ಹರಡಲಾಗುತ್ತಿದೆ. ಕೆಲವರು ಅದನ್ನು ಕ್ಲಿಕ್ಕಿಸಿ ಹಣ ಹಾಗೂ ಮಾಹಿತಿ ಕಳೆದುಕೊಂಡ ಪ್ರಕರಣಗಳು ಹಲವೆಡೆ ಬೆಳಕಿಗೆ ಬಂದಿವೆ. ಈ ಸಂಬಂಧ ಎಚ್ಚೆತ್ತುಕೊಂಡಿರುವ ಐಆರ್‌ಸಿಟಿಸಿಯು ಸ್ವಯಂಪ್ರೇರಿತವಾಗಿ ಸಾರ್ವಜನಿಕರಿಗೆ ವಂಚನೆಯ ಜಾಲದ ಬಗ್ಗೆ ಎಚ್ಚರಿಸುವ ಅಭಿಯಾನಕ್ಕೆ ಮುಂದಾಗಿದೆ.

ಆ್ಯಂಡ್ರಾಯ್ಡ್ ಬಳಕೆದಾರರನ್ನೇ ಗುರಿಯಾಗಿಸಿಕೊಂಡು, ನಕಲಿ ಐಆರ್‌ಸಿಟಿಸಿ ಆ್ಯಪ್ ಡೌನ್‌ಲೋಡ್ ಮಾಡುವಂತೆ ಸಾಮಾಜಿಕ ಜಾಲತಾಣ ಹಾಗೂ ಇಮೇಲ್‌ನಲ್ಲಿ ವಂಚನೆ ನಡೆಯುತ್ತಿದೆ. ಹೀಗಾಗಿ, ಅನುಮಾನಾಸ್ಪದ ಲಿಂಕ್‌ಗಳನ್ನು ಕ್ಲಿಕ್ಕಿಸದಿರುವುದೇ ಉತ್ತಮ. ವಂಚನೆಯು ಇಮೇಲ್ ಮೂಲಕ ನಡೆಯುತ್ತಿದ್ದು, ದುರುದ್ದೇಶಪೂರಿತ ಪ್ರಚಾರ ಮತ್ತು ನಕಲಿ ಅಪ್ಲಿಕೇಷನ್‌ನ ಬಗ್ಗೆ ಐಆರ್‌ಸಿಟಿಸಿ ಎಚ್ಚರಿಕೆ ನೀಡಿದೆ.

‘ದುರುದ್ದೇಶಪೂರಿತ ಮತ್ತು ನಕಲಿ ಮೊಬೈಲ್ ಅಪ್ಲಿಕೇಷನ್ ಪ್ರಚಾರವು ಚಲಾವಣೆಯಲ್ಲಿದೆ ಎಂಬ ಬಗ್ಗೆ ವರದಿಯಾಗಿದೆ. ಕೆಲ ವಂಚಕರು ದೊಡ್ಡ ಮಟ್ಟದಲ್ಲಿ ಫಿಶಿಂಗ್ ಲಿಂಕ್‌ಗಳನ್ನು ಹರಡುತ್ತಿದ್ದಾರೆ. ಜನಸಾಮಾನ್ಯರನ್ನು ಮೋಸಗೊಳಿಸಲು ನಕಲಿ ‘ಐಆರ್‌ಸಿಟಿಸಿ ರೈಲ್ ಕನೆಕ್ಟ್’ ಮೊಬೈಲ್ ಅಪ್ಲಿಕೇಷನ್ ಡೌನ್‌ಲೋಡ್ ಮಾಡಲು ಒತ್ತಾಯಿಸುತ್ತಿದ್ದಾರೆ. ಜನರು ಇಂತಹ ವಂಚಕರಿಗೆ ಬಲಿಯಾಗಬಾರದು. ಗೂಗಲ್ ಪ್ಲೇ ಸ್ಟೋರ್ ಅಥವಾ ಆ್ಯಪಲ್ ಆ್ಯಪ್ ಸ್ಟೋರ್‌ನಿಂದ ಐಆರ್‌ಸಿಟಿಸಿಯ ಅಧಿಕೃತ ರೈಲ್ ಕನೆಕ್ಟ್ ಮೊಬೈಲ್ ಅಪ್ಲಿಕೇಷನ್ ಅನ್ನು ಡೌನ್‌ಲೋಡ್ ಮಾಡಿಕೊಂಡು ಬಳಸಬೇಕು. ಹೆಚ್ಚಿನ ಮಾಹಿತಿಗೆ ಅಧಿಕೃತ ವೆಬ್‌ಸೈಟ್ http://irctc.co.in ನಲ್ಲಿ ಪ್ರಕಟಿಸಲಾದ ಕಸ್ಟಮರ್ ಕೇರ್‌ಗೆ ಕರೆ ಮಾಡಿ. ಬಿ ಅಲರ್ಟ್, ಬಿ ಸೇಫ್’ ಎಂದು ನಿಗಮವು ತನ್ನ ವೆಬ್‌ಸೈಟ್‌ನಲ್ಲಿ ಹಾಗೂ ಸಾಮಾಜಿಕ ಜಾಲತಾಣಗಳ ತನ್ನ ಖಾತೆಗಳಲ್ಲಿ ಬರೆದುಕೊಂಡಿದೆ. ■




### ಇದರ ಬಗ್ಗೆ ಎಚ್ಚರಿಕೆ ಇರಲಿ

- ಅಧಿಕೃತವೆಂದು ಖಾತರಿಯಾಗಿಸಿಕೊಂಡು ಪ್ಲೇ ಸ್ಟೋರ್, ಆ್ಯಪಲ್ ಸ್ಟೋರ್‌ನಿಂದ ಆ್ಯಪ್ ಡೌನ್‌ಲೋಡ್ ಮಾಡಿ.
- ಸರ್ಕಾರಿ ಸಂಸ್ಥೆಗಳು ಅಪ್ಲಿಕೇಷನ್‌ಗಳನ್ನು ಡೌನ್‌ಲೋಡ್ ಮಾಡಲು ಲಿಂಕ್‌ಗಳನ್ನು ಹಂಚಿಕೊಳ್ಳುವುದಿಲ್ಲ.
- ಡೌನ್‌ಲೋಡ್ ಮಾಡುವಂತೆ ಐಆರ್‌ಸಿಟಿಸಿಯೂ ಇಮೇಲ್, ಸಾಮಾಜಿಕ ಜಾಲತಾಣಗಳಲ್ಲಿ ಲಿಂಕ್ ಕಳುಹಿಸುವುದಿಲ್ಲ.
- ಕೊಡುಗೆಗಳು, ರಿಯಾಯ್ತಿಯ ಆಮಿಷಕ್ಕೆ ಬಲಿಯಾಗದಿರಿ.
- ಅಪ್ಲಿಕೇಷನ್ ಇನ್‌ಸ್ಟಾಲ್ ಮಾಡಿಕೊಳ್ಳುವ ಮುನ್ನ ರಿವ್ಯೂಗಳನ್ನು ಪರಿಶೀಲಿಸಿ.
- ಕಾನೂನುಬದ್ಧ ಅಪ್ಲಿಕೇಷನ್ ಡೆವಲಪರ್‌ಗಳು ವ್ಯಾಕರಣ ಮತ್ತು ಕಾಗುಣಿತದಲ್ಲಿ ದೋಷಗಳನ್ನು ಮಾಡುವುದಿಲ್ಲ. ಹೀಗಾಗಿ ಅಪ್ಲಿಕೇಷನ್ ಇನ್‌ಸ್ಟಾಲ್ ಮಾಡಿಕೊಳ್ಳುವ ಮುನ್ನ ಹೆಸರು ಮತ್ತು ವಿವರಣೆಗಳನ್ನು ಎಚ್ಚರಿಕೆಯಿಂದ ಓದಬೇಕು.

# ಸಾರ್ವಜನಿಕರಿಗೆ ಯುಐಡಿಎಐ ಎಚ್ಚರಿಕೆ

ಭಾರತೀಯ ವಿಶಿಷ್ಟ ಗುರುತಿನ ಪ್ರಾಧಿಕಾರದ (ಯುಐಡಿಎಐ) ಹೆಸರಿನಲ್ಲಿ ಡಾಟಾ ವಂಚನೆ ಮಾಡುತ್ತಿರುವ ಪ್ರಕರಣಗಳು ಈಚೆಗೆ ಬೆಳಕಿಗೆ ಬಂದಿದ್ದು, ಈ ಬಗ್ಗೆ ಜಾಗರೂಕತೆಯಿಂದ ಇರುವಂತೆ ಸಾರ್ವಜನಿಕರಿಗೆ ಪ್ರಾಧಿಕಾರವು ಎಚ್ಚರಿಕೆ ನೀಡಿದೆ. ಅಲ್ಲದೆ ಪ್ರಾಧಿಕಾರವು ದೇಶದ ಜನರಿಂದ ‘ಆಧಾರ್’ ಮಾಹಿತಿಯನ್ನು ಇಮೇಲ್ ಅಥವಾ ವಾಟ್ಸ್‌ಆ್ಯಪ್ ಮೂಲಕ ಎಂದೂ ಕೇಳುವುದಿಲ್ಲ ಎಂದು ಸ್ಪಷ್ಟನೆಯನ್ನೂ ನೀಡಿದೆ.

ಇಂಟರ್‌ನೆಟ್ ಪಾರುಪತ್ಯದ ಈ ಯುಗದಲ್ಲಿ ಸೈಬರ್ ಕ್ರೈಮ್ ಬಗ್ಗೆ ಜಾಗೃತಗೊಳ್ಳದ ಅಮಾಯಕರನ್ನು ವಂಚಿಸುವ ದೊಡ್ಡ ಪಡೆ ಸಕ್ರಿಯವಾಗಿದೆ. ಈ ವಂಚಕರು ತಮ್ಮ ಕಾರ್ಯಸಾಧನೆಗೆ ಆಧಾರ್ ಮಾಹಿತಿಯನ್ನು ಯುಐಡಿಎಐ ಹೆಸರಿನಲ್ಲಿ ಪಡೆದು ಸಾರ್ವಜನಿಕರನ್ನು ವಂಚಿಸುತ್ತಿರುವ ಪ್ರಕರಣಗಳು ಈಚೆಗೆ ವರದಿಯಾಗಿದ್ದವು.




ಈ ಬಗ್ಗೆ ಎಚ್ಚೆತ್ತುಕೊಂಡಿರುವ ಯುಐಡಿಎಐ ತನ್ನ ಎಕ್ಸ್(ಟ್ವಿಟರ್)ನಲ್ಲಿ ‘ವಂಚಕರಿಂದ ಎಚ್ಚರವಾಗಿರಿ. ಯುಐಡಿಎಐ ಎಂದಿಗೂ ನಿಮ್ಮ ಆಧಾರ್ ಅನ್ನು ನವೀಕರಿಸಲು ಇಮೇಲ್ ಅಥವಾ ವಾಟ್ಸ್‌ಆ್ಯಪ್ ಮೂಲಕ ನಿಮ್ಮ ಆಧಾರ್ ದಾಖಲೆಯನ್ನು ಕೇಳುವುದಿಲ್ಲ. #myAadhaarPortal ಮೂಲಕ ಅಥವಾ ಹತ್ತಿರದ ಆಧಾರ್ ಕೇಂದ್ರಗಳಲ್ಲಿ ಮಾತ್ರ ನಿಮ್ಮ ಆಧಾರ್‌ಗಳನ್ನು ಅಪ್‌ಡೇಟ್ ಮಾಡಲಾಗುತ್ತದೆ. ನೀವೂ ಅಲ್ಲಿಯೇ ಅಪ್‌ಡೇಟ್ ಮಾಡಿಕೊಳ್ಳಿ’ ಎಂದು ಪ್ರಕಟಿಸಿದೆ.

ವ್ಯಕ್ತಿ ಗುರುತಿನ ದಾಖಲೆಯಷ್ಟೇ ಅಲ್ಲ. ಇದು ಮಹತ್ವದ ದಾಖಲೆಯೂ ಹೌದು. ಆಧಾರ್ ಕಾರ್ಡ್ ವ್ಯಕ್ತಿಯ ಹೆಸರು, ಫೋಟೊ, ವಿಳಾಸ, ಬಯೋಮೆಟ್ರಿಕ್ ಡೇಟಾ, ಆಧಾರ್ ಸಂಖ್ಯೆಯೊಂದಿಗೆ ಲಿಂಕ್ ಆಗಿರುವ ಬ್ಯಾಂಕ್ ಖಾತೆಗಳ, ಯುಪಿಐ ಐಡಿ ಸೇರಿದಂತೆ ಹಲವು ವಿವರಗಳನ್ನು ಒಳಗೊಂಡಿರುತ್ತದೆ. ಈ ಮಾಹಿತಿಯನ್ನು ಕದ್ದು ದುರ್ಬಳಕೆ ಮಾಡಿಕೊಳ್ಳುವ ವ್ಯವಸ್ಥಿತ ಜಾಲವು ಸಕ್ರಿಯವಾಗಿದೆ. ಇಮೇಲ್, ವಾಟ್ಸ್‌ಆ್ಯಪ್ ಮೂಲಕ ಆಧಾರ್ ಮಾಹಿತಿ, ಒಟಿಪಿ ಕಳುಹಿಸುವಂತೆ ಕೇಳಲಾಗುತ್ತಿದೆ. ಹೀಗಾಗಿ, ಯುಐಡಿಎಐ ಎಚ್ಚರಿಕೆ ನೀಡಿದೆ. ಅಲ್ಲದೆ, ಆಧಾರ್‌ಗೆ ಸಂಬಂಧಿಸಿದ ಯಾವುದೇ ಮಾಹಿತಿ ಪಡೆಯಲು ಯುಐಡಿಎಐನ ಅಧಿಕೃತ ವೆಬ್‌ಸೈಟ್ http://uidai.gov.inಗೆ ಭೇಟಿ ನೀಡುವಂತೆ ಅಥವಾ ಆಧಾರ್ ಅಪ್ಲಿಕೇಷನ್ ಡೌನ್‌ಲೋಡ್ ಮಾಡಿಕೊಳ್ಳುವಂತೆ ಸೂಚಿಸಿದೆ. ■